ಪದ್ಮಾವತಿ ಕೂದಲು ಹಿಂಡಿ ಒರೆಸಿಕೊಳ್ಳುತ್ತ ಅಡುಗೆಕೋಣೆ ಬಿಟ್ಟರೆ ಇರುವ ಹಾಲು ಅನಿಸಿಕೊಳ್ಳುವ ಭಾಗಕ್ಕೆ ಬಂದಳು. ಒಳಗೆ ಕಾಶವ್ವ ಹಿಟ್ಟು ಕಲಸಿ ಕಲ್ಲಿನಮೇಲೆ ದಪ್‌ದಪ್ ಅಂತ ರೊಟ್ಟಿ ತಟ್ಟುತ್ತಿರುವ ಸದ್ದು ಕೇಳುತ್ತಿತ್ತು. 'ಬೆಳಗ್ಗೆ ಹಿಟ್ಟು ಮುಗದುಹೋತು... ಎಲ್ಲಿ ಕೇಳದವ್ವ' ಅಂತ ಆಕಾಶ ಬಿದ್ದಂತೆ ಪರದಾಡುತ್ತಿದ್ದವಳು ಎಲ್ಲಿಂದ ಹೊಂದಿಸಿದಳೋ ಅನ್ನುವ ವ್ಯಸನದಲ್ಲಿ, ಟೈಪ್‌ರೈಟಿಂಗ್ ಕ್ಲಾಸು ಬಂದಾಗಿದ್ದಕ್ಕೆ ಮನೆಯಲ್ಲೆ ಇರುತ್ತಿದ್ದ ಕಿರಿಯ ತಂಗಿ ಮಾಲತಿ ಎರಡನೆಯವಳಾದ ಶುಭಾಳೊಂದಿಗೆ ಏನೋ ಗುಸುಗುಸು ಚರ್ಚೆಯಲ್ಲಿದ್ದವಳು ಇವಳ ಪ್ರವೇಶದೊಂದಿಗೆ ತಟ್ಟನೆ ಮೌನಕ್ಕೆ ಜಾರಿದ್ದನ್ನು ಗಮನಿಸಲಿಲ್ಲ.

ಅಪ್ಪ ಇದ್ದಾಗಲೂ ಸಾಲ ಆಗುತ್ತಲೆ ಇತ್ತು; ಅಪ್ಪ ಅದನ್ನ ತೀರಿಸುತ್ತಲೂ ಇದ್ದ. ವರ್ಷದ ಹತ್ತು ತಿಂಗಳಿಗಾಗುವಷ್ಟು ಜೋಳ ಮನೆಗೆ ಬರುತ್ತಿತ್ತು. ಆ ಕೆಲಸ ಈ ಕೆಲಸ ಅಂತ ಸಂಸಾರ ನಿಭಾಯಿಸುತ್ತಿದ್ದ. ಹೋತಿನಮನೆ ಬಸ್ಯ ಆವತ್ತು ಓಡೋಡಿ ಬಂದವ, 'ಚಂದಣ್ಣಗ ಹಾವು ಕಡದಾದ... ಹೊಲದಾಗ ಮಲಗ್ಯಾನು...' ಅಂತ ಸುದ್ದಿ ಕೊಟ್ಟಾಗ ಅವ್ವನ ತಲೆಯಮೇಲಿದ್ದ ನೀರಿನ ಕೊಡ ಕೆಳಗೆ ಬಿದ್ದಿದ್ದೂ ಅರಿವಿಲ್ಲದೆ, 'ಅಯ್ಯ ಶಿವನಾ!... ಇದೇನು ಮಾಡಿದಿ!...' ಅಂತ ಕೂಗಿಕೊಳ್ಳುತ್ತ ಎರಡೆರಡು ಸಾರಿ ಎಡವಿ ಬಿದ್ದರೂ ಲೆಕ್ಕಿಸದೆ ಎದ್ದು ಓಡುತ್ತ ಅವಳ ಹಿಂದೆ ತಾವೂ ಓಡುತ್ತ ಹೊಲಕ್ಕೆ ಹೋದಾಗ ಅಲ್ಲಿ ದಿಬ್ಬದಮೇಲೆ ಅಪ್ಪ ಮುಗುಳ್ನಗುತ್ತ ಕೂತಿದ್ದ. 'ಏನಾತ್ರಿ ನಿಮಗ?' ಅಂತ ಅವ್ವ ಮಾತಾಡಲು ತ್ರಾಣವಿಲ್ಲದೆ ಏದುಸಿರು ಬಿಡುವಾಗ, 'ಏ... ಏನಿಲ್ಲ್ ತೆಗಿ. ಕಾಗಿ ಜೋಡ್ಯಾಗಿದ್ದು ನೋಡಿದೆ' ಅಂತ ಸಮಜಾಯಿಷಿ ಕೊಟ್ಟ ಅಪ್ಪ, 'ಮೊಣಕಾಲು ವಡದ ರಕ್ತ ಬಸಿಲಾಕ ಹತ್ಯದ. ಯಾಕ ಹಾಂಗ ಓಡಿ ಬರಾಕ್ ಹೋದಿ?' ಅಂತ ಕಾಳಜಿ ತೋರಿಸಿದ್ದ. ಅಂತೂ ಕಂಟಕ ನಿವಾರಣೆಯಾಯಿತಲ್ಲ ಅಂತ ತಾವೆಲ್ಲ ಖುಷಿಯಲ್ಲಿ ಮಾತಾಡಿಕೊಂಡು ನಿಸೂರಾಗಿದ್ದೆವು. ಅವ್ವ ಮಾತ್ರ ಮೂರುದಿನ ಮೊಳಕಾಲಿಗೆ ಮುಲಾಮು ಹಚ್ಚಿಕೊಳ್ಳುತ್ತ ಕಾಗೆಯ ಮೇಲೂ ಅಪ್ಪನ ಮೇಲೂ ಸಿಡುಕುತ್ತ ಕುಂಟಿದಳು. ಸುಗ್ಗಿ ಮುಗಿದು ಆರು ತಿಂಗಳಾಗಿತ್ತು. ಮುಂಗಾರು ಮಳೆ ಆ ವರ್ಷವೂ ತಡವಾಗಿ ಕಪ್ಪು ಮಣ್ಣು ಕಾದು ಹಬೆಯೇಳುತ್ತಿತ್ತು. ಕೆಂಡದಂತಹ ಬಿಸಿಲ ಮಧ್ಯಾಹ್ನದಲ್ಲಿ ಸುಂಟರಗಾಳಿ ರುಮುರುಮು ತಿರುಗುತ್ತ ಕಸಕಡ್ಡಿ ದೂಳು ತಿಪ್ಪೆಯ ಕಾಗದ ಹರಕುವಸ್ತ್ರವನ್ನೆಲ್ಲ ಬಾಚಿಕೊಂಡು ಕಂಬದಂತೆ ಅಷ್ಟೆತ್ತರಕ್ಕೆದ್ದು ಬಯಲಿನಲ್ಲಿ ಚಲಿಸುತ್ತಿತ್ತು. ಹುಬ್ಬಿನಮೇಲೆ ಅಂಗೈಯಿಟ್ಟುಕೊಂಡು ಆಕಾಶದ ಕಡೆ ನೋಡುತ್ತ ಬಿಸಿಯುಸಿರು ಬಿಡುವುದು ಊರವರ ಕಾಯಕವಾಗಿತ್ತು. ಆವತ್ತು ರಾತ್ರಿ ಭರ್ರ್ ಅಂತ ಒಂದು ಮಳೆ ಹಾಗೆ ಬಂದು ಹೀಗೆ ಹೋಗಿತ್ತು. ಹೊರಜಗುಲಿಯಲ್ಲಿ ಸಾಲಾಗಿ ಮಲಗಿದ ತಮಗೆಲ್ಲ ಮಣ್ಣು ಅರಳುವ ಕಂಪು ಮೂಗಿಗಡರಿ ನೆತ್ತಿಗೇರುತ್ತ ಏನೋ ಸಂಭ್ರಮ. ಬೆಳಗ್ಗೆ ಎದ್ದವರಿಗೆ ಬಾನಿನಂಚಿನಲ್ಲಿ ಕಪ್ಪುಜಡೆ ಹರಡಿಕೊಂಡಂತೆ ತಲೆಯಮೇಲೆ ಮೋಡದ ಹೊರೆ ಹೊತ್ತುಕೊಂಡೆ ಕಂದಿದ ಸೂರ್ಯ ದರ್ಶನ ಕೊಟ್ಟ. ಎರಡು ರೊಟ್ಟಿ ಚಹಾದ ನಾಷ್ಟಾ ಮುಗಿಸಿ ಉತ್ಸಾಹ ಉಕ್ಕಿಸುತ್ತ ಹೊಲ ನೋಡಿಕೊಂಡ್ ಬರ್ತೀನಿ ಅಂತ ಹೋದ ಅಪ್ಪ. ಎಲ್ಲಿತ್ತೋ ಗಾಳಿ, ಮಲಗಿದ ಹಾವು ಭುಸುಗುಟ್ಟಿ ಎದ್ದಂತೆ ಭರ್ರೋ ಅಂತ ಬೀಸುತ್ತ ನೆಲದಮೇಲಿನ ಕಸಕಡ್ಡಿಯನ್ನೆಲ್ಲ ಮೊಗೆದು ಆಕಾಶಕ್ಕೆ ಎರಚುತ್ತ ಹುಚ್ಚು ಹಿಡಿದಂತೆ ಕುಣಿಯಿತು. ನಭೋಮಂಡಲಕ್ಕೆಲ್ಲ ಮೆತ್ತಿಕೊಂಡ ಮಸಿಯಂತಹ ಮೋಡ ಮಿಂಚಿನ ಮಾಲೆ ತಿರುಗಿಸುತ್ತ ಗುಡುಗು ಸಿಡಿಲುಗಳ ರಣಭೇರಿ ಬಾರಿಸತೊಡಗಿತು. 'ಇವ್ರಿಗ್ಯಾಕ ಈಗ ಹೊಲಕ್ ಹೋಗದಿತ್ತೋ ಶಿವನ...' ಅಂತ ಅವ್ವ ಕ್ಷಣಕ್ಕೊಮ್ಮೆ ಹೊರಗೆ ನೋಡುತ್ತ ಚಡಪಡಿಸುತ್ತಿದ್ದಳು. ದೊಡ್ಡದೊಡ್ಡ ಹನಿಗಳು ಸುರಿಯುತ್ತ ಭೈರವನ ಜಡೆಯಲ್ಲಿ ಬೈತಲೆ ತೆಗೆದಂತೆ ಇಳಿಯುವ ಮಿಂಚು, ಕರಿಮೋಡದ ಗರ್ಭವನ್ನೆ ಸಿಡಿಸುವ ಡೈನಮೈಟಿನಂತ ಗುಡುಗು ಸಿಡಿಲು ಅರ್ಧತಾಸು ಮನಸೋ ಇಚ್ಚೆ ದಾಂಗುಡಿಯಿಟ್ಟು ಭೂಮಿ ಕಂಗಾಲಾಯಿತು. ಆವತ್ತಿನ ಮಳೆ ತಮ್ಮೂರಿಗೆ ತಮ್ಮನೆಗೆ ಅಂತಲೆ